ಕನ್ನಡ / KANNADA

ಪತ್ರಿಕೆ II / Paper II

(ಸಾಹಿತ್ಯ) / (LITERATURE)

ವೇಳೆ : **ಮೂರು** ಗಂಟೆ *Time Allowed : **Three** Hours*	ಗರಿಷ್ಠ ಅಂಕಗಳು : **250** *Maximum Marks : **250***

ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

Question Paper Specific Instructions

Please read each of the following instructions carefully before attempting questions :

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Questions no. **1** and **5** are compulsory and out of the remaining, any **THREE** are to be attempted choosing at least **ONE** question from each section.*

The number of marks carried by a question / part is indicated against it.

*Answers must be written in **KANNADA (Kannada script)**.*

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

Optional Province · optionalprovince.com

SECTION A

Q1. ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) *10×5=50*

(a) ಪಿಡಿದೆಡಗೆಯ್ಯ ಚಾಮರದ ದಕ್ಷಿಣ ಹಸ್ತದ ಪದ್ಮಮೊಳ್ಪೊಡಂ
ಬಡೆ ನಸು ಮಾನಿ ಪಾಡಳಿದ ರೂಪಿನೊಳುಣ್ಮವಗಾಡಿ ನಾಡೆಕ।
ಣ್ಗಿಡರೆ ತೊಡಂಕಿ ಪೀರಿದ ಕುರುಳ್ಗಳೆ ಚಿತ್ತದೊಳಾದ ಬೇಸ ಱಂ
ನುಡಿವವೊಲಾಗೆ ಬರ್ಪ ಕಮಳಾಯತನೇತ್ರೆಯನಿಂದು ವಕ್ತ್ರೆಯಂ।। *10*

(b) ಒಂದು ಬನಮಂ ಪೊಕ್ಕು ಮಿಕ್ಕ ಸಂತೋಷದಿಂ
ಮುಂದೆ ಸಿಂಹಾಸನವನಿಕ್ಕಲು ವಿಲಾಸದಿಂ।
ದೆಸೆಯ ಕುಳ್ಳಿರ್ದನಾ ಸುಕುಮಾರ ಸೌದರಂ
ವಸುಧೆಗೊಪ್ಪುವ ಮರ್ತ್ಯ ಮಂಡಲ ಪುರಂದರಂ।। *10*

(c) ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ
ಚೆನ್ನಮಲ್ಲಿಕಾರ್ಜುನಾ ನೀನೊಡ್ಡಿದ ಮಾಯೆಯನಾರೂ ಗೆಲಲಾರರು ... *10*

(d) ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಱಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸೆಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ।। *10*

(e) ಕಾದಿ ಕೊಲುವೊಡೆ ಪಾಂಡುಸುತರು ಸ
ಹೋದರರು ಕೊಲಲಿಲ್ಲ ಕೊಲ್ಲದೆ
ಕಾದೆನಾದೊಡೆ ಕೌರವಂಗನಿಯಲಿ ಹೊಗಲಿಲ್ಲ
ಬೇಧದಲಿ ಹೊಕ್ಕಿರಿದನೋ ಮಧು
ಸೂದನನು ತಾನಕಟೆನುತ ಘನ ಚಿಂ
ತೋದಧಿಯಲದ್ದವೊಲು ಮೌನದೊಳಿದ್ದನಾ ಕರ್ಣ *10*

Optional Province · optionalprovince.com

Q2. (a) ಪಂಪ 'ವಿಕ್ರಮಾರ್ಜುನ ವಿಜಯ' ಎಂದು ಹೆಸರಿಟ್ಟರೂ 'ಕರ್ಣ ರಸಾಯನಮಲ್ತೆ ಭಾರತಂ' ಎಂದು ಏಕೆ ಹೇಳುತ್ತಾನೆ ? ಚರ್ಚಿಸಿ. *20*

(b) 'ವಡ್ಡಾರಾಧನೆ' ಯ ಕಥೆಗಳು ಜೈನ ಧರ್ಮಾವಲಂಬನೆಯಿಂದ ಕೂಡಿದವು ಎನ್ನಬಹುದೆ ? ವಿಶ್ಲೇಷಿಸಿ. *20*

(c) 'ಭರತೇಶ ವೈಭವ' ದಲ್ಲಿ ಭೋಗದ ಉತ್ತುಂಗತೆಯನ್ನು ಹೇಗೆ ಚಿತ್ರಿಸಲಾಗಿದೆ ? ವಿವರಿಸಿ. *10*

Q3. (a) ನಂಬಿಯಣ್ಣನ ರಗಳೆಯಲ್ಲಿ ಶೃಂಗಾರ ಮತ್ತು ವೈರಾಗ್ಯವನ್ನು ಸದುಪಾಕಗೊಳಿಸಿದ ಕವಿಯ ಮರ್ಮವನ್ನು ವಿಶ್ಲೇಷಿಸಿ. *20*

(b) ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ವಿಷಮತೆಗಳ ಪ್ರಶ್ನೆ ಹೇಗೆ ಕಂಡು ಬರುತ್ತದೆ ? ವಿವರಿಸಿ. *20*

(c) ಕನ್ನಡದ ಕಾವ್ಯ ಪರಂಪರೆಯಲ್ಲಿ ರತ್ನಾಕರವರ್ಣಿ ಯಾಕೆ ಮುಖ್ಯ ? ವಿಶ್ಲೇಷಿಸಿ. *10*

Q4. (a) 'ವಚನ ಕಮ್ಮಟ' – ಪುಸ್ತಕದ ಸಾಂಸ್ಕೃತಿಕ ಮಹತ್ವವನ್ನು ವಿವರಿಸಿ. *20*

(b) 'ಕರ್ಣಪರ್ವ' ದಲ್ಲಿ ಬರುವ ಕರ್ಣಾರ್ಜುನರ ವಾಗ್ವಾದವನ್ನು ನಿರೂಪಿಸಿ. *20*

(c) ಅಕ್ಕಮಹಾದೇವಿ ಮತ್ತು ಚೆನ್ನಮಲ್ಲಿಕಾರ್ಜುನನ ಸಂಬಂಧದ ಸ್ವರೂಪವನ್ನು ವಿವರಿಸಿ. *10*

Optional Province · optionalprovince.com

SECTION B

Q5. ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

(ಪ್ರತಿಯೊಂದೂ 150 ಪದಗಳ ಮಿತಿಯ ಉತ್ತರವಾಗಲಿ) ***10×5=50***

(a) ಕನ್ನಡ ಸಾಹಿತ್ಯದ ನವೋದಯ ಕಾಲದ ಸಣ್ಣಕಥೆಗಳು *10*

(b) 'ಶೂದ್ರ ತಪಸ್ವಿ' ನಾಟಕದ ವರ್ಣ ಸಂಘರ್ಷ *10*

(c) ತುಘಲಕ್‌ನ ಮಹತ್ವಾಕಾಂಕ್ಷೆ *10*

(d) 'ಜನಪದ ಗೀತಾಂಜಲಿ' – ದೇಜಗೌ ಸಂಪಾದಿಸಿದ ಈ ಪುಸ್ತಕವನ್ನು ವಿಮರ್ಶಿಸಿ. *10*

(e) ಜೀಶಂಪ ಅವರು ಸಂಪಾದಿಸಿದ 'ಕನ್ನಡ ಜನಪದ ಕಥೆಗಳು' – ಪುಸ್ತಕವನ್ನು ಪರಿಚಯಿಸಿ. *10*

Q6. (a) 'ಒಡಲಾಳ' ಕೃತಿಯಲ್ಲಿ ದಲಿತರ ದಾರುಣತೆಯನ್ನು ದೇವನೂರರು ಹೇಗೆ ಚಿತ್ರಿಸಿದ್ದಾರೆ? *20*

(b) ಜಿ.ಎಚ್. ನಾಯಕರು ಸಂಪಾದಿಸಿದ 'ಹೊಸಗನ್ನಡ ಕವಿತೆ' ಸಂಕಲನ ಯಾಕೆ ಪ್ರಾತಿನಿಧಿಕವಾದ ಕವನ ಸಂಕಲನವಾಗಿದೆ? ವಿಶ್ಲೇಷಿಸಿ. *20*

(c) 'ಪ್ರಗತಿಶೀಲ' ಪಂಥದ ಕಥೆಗಳ ವಿಚಾರಪ್ರಿಯತೆಯನ್ನು ಒಂದು ಉದಾಹರಣೆಯೊಂದಿಗೆ ವಿವರಿಸಿ. *10*

Q7. (a) 'ಬೆಟ್ಟದ ಜೀವ' ಕಾದಂಬರಿಯು ಬದುಕು ಹದವಾಗುವ ಬಗೆಯನ್ನು ಸೂಚಿಸುತ್ತದೆ. ವಿವೇಚಿಸಿ. *20*

(b) 'ದೇವರು' – ಕೃತಿಯ ವೈಚಾರಿಕ ಮಹತ್ವವನ್ನು ವಿಶ್ಲೇಷಿಸಿ. *20*

(c) ಕೆ.ಎಸ್.ನ. ಅವರ ಕವನಗಳ ಆಶಯವನ್ನು ಕುರಿತು ಬರೆಯಿರಿ. *10*

Q8. (a) ಒಗಟುಗಳು ಮನುಷ್ಯ ಸಮಾಜದ ಸೃಜನಶೀಲತೆಯನ್ನು ಹೇಗೆ ಪ್ರತಿಫಲಿಸುತ್ತವೇ ? ವಿಶ್ಲೇಷಿಸಿ. *20*

(b) ಕಾಳೇಗೌಡ ನಾಗವಾರರು ಸಂಪಾದಿಸಿದ 'ಬೀದಿ ಮಕ್ಕಳು ಬೆಳೆದೊ' – ಕೃತಿಯ ಸಾಮಾಜಿಕ ಮಹತ್ವವನ್ನು ವಿಷದಪಡಿಸಿ. *20*

(c) ಕನ್ನಡ ಜಾನಪದ ಅಧ್ಯಯನಕ್ಕೆ 'ಜಾನಪದ ಸ್ವರೂಪ' ಕೃತಿಯ ಕೊಡುಗೆಯೇನು? *10*

Optional Province · optionalprovince.com